## ನಿಮ್ಮೊಡನೆ

# ಮೂಢನಂಬಿಕೆಗಳ ಬಂಧನದಿಂದ ಸ್ವಾತಂತ್ರ್ಯ ಯಾವಾಗ?

ವೈಜ್ಞಾನಿಕವಾಗಿ ದೇಶ ಬಹಳಷ್ಟು ಮುನ್ನಡೆ ಸಾಧಿಸಿದೆ ಎಂದು ಹೆಮ್ಮೆಯಿಂದ ಬೀಗುತ್ತೇವೆ. ಆದರೆ, ಮಕ್ಕಳಿಗೆ ಕಲಿಸುವ ಗುರುತರ ಹೊಣೆ ಹೊತ್ತಿರುವ ಮೇಷ್ಟ್ರುಗಳ ಮಿದುಳಿಗೇ ಇನ್ನೂ ವೈಜ್ಞಾನಿಕ ಮನೋಭಾವ ಹೊಕ್ಕಿಲ್ಲ. ಲಿಂಗಸಂವೇದನೆ ಕುರಿತು ಶಿಕ್ಷಕರಲ್ಲಿ ಸ್ಪಷ್ಟ ತಿಳಿವಳಿಕೆ ಮೂಡಿಲ್ಲ.

ಮೂಢನಂಬಿಕೆಗಳ ವಿರುದ್ಧ ದೇಶದಲ್ಲಿ ಕಾನೂನು ರೂಪಿಸಿದ ಮೊದಲ ರಾಷ್ಟ್ರ ಮಹಾರಾಷ್ಟ್ರ. ಮನುಷ್ಯನ ಘನತೆ ಕುಗ್ಗಿಸುವ ಮೌಢ್ಯದ ವಿರುದ್ಧ ದೊಡ್ಡ ಮಟ್ಟದಲ್ಲಿ ಹೋರಾಟಗಳನ್ನು ಸಂಘಟಿಸಿದ ಇತಿಹಾಸವನ್ನೂ ಮರಾಠಾ ನೆಲ ಹೊಂದಿದೆ. 19ನೇ ಶತಮಾನದಲ್ಲಿ ಅಲ್ಲಿ ನಡೆದ ಇಂತಹ ಹೋರಾಟಗಳಿಗೆ ಶಾಹು ಮಹಾರಾಜರ ಬೆಂಬಲ ಕೂಡ ಇತ್ತು ಎಂಬುದು ಇತಿಹಾಸ ಪುಟಗಳಲ್ಲಿ ದಾಖಲಾಗಿದೆ. ಅದೇ ನೆಲದ ಮಹಾಪ್ರತಿಭೆ ಬಿ.ಆರ್. ಅಂಬೇಡ್ಕರ್ ಅವರು ಜನರ ಅಜ್ಞಾನವನ್ನು ಅಕ್ಷರ ಜ್ಞಾನದಿಂದಲೇ ದೂರ ಮಾಡಬೇಕು ಎಂದು ಕರೆ ಕೊಟ್ಟಿದ್ದರು. ವಿಚಿತ್ರ ಎಂದರೆ, ಅಕ್ಷರ ಕಲಿಸುವ ಗುರುಗಳೇ ಮೌಢ್ಯ ಪೋಷಣೆಗೆ ನಿಂತ ವಿದ್ಯಮಾನವೊಂದು ಅದೇ ರಾಜ್ಯದ ನಾಸಿಕ್‌ನಿಂದ ಇತ್ತೀಚೆಗೆ ವರದಿಯಾಗಿದೆ. ವಿದ್ಯಾರ್ಥಿನಿಯರು ಮುಟ್ಟಾಗಿದ್ದರೆಂಬ ಕಾರಣಕ್ಕೆ ಶಾಲಾ ಆವರಣದಲ್ಲಿ ಗಿಡ ನೆಡಲು ಶಿಕ್ಷಕರೊಬ್ಬರು ಅವರಿಗೆ ಅವಕಾಶ ನಿರಾಕರಿಸಿದ್ದಾರೆ. ಅರಿವು ಬಿತ್ತಬೇಕಾದ ಶಾಲಾ ಆವರಣವು ಮೌಢ್ಯ ಬಿತ್ತನೆಯ ತಾಣವಾಗುವುದಾದರೆ 'ಶಿಕ್ಷಣವೇ ಶಕ್ತಿ' ಎಂಬ ಘೋಷವಾಕ್ಯವನ್ನೇ ಬದಲಾಯಿಸಬೇಕಾಗುತ್ತದೆ!

ಹೆಣ್ಣನ್ನು ಅಂಕೆಯಲ್ಲಿ ಇರಿಸಿಕೊಳ್ಳಲು ನಮ್ಮ ಸಮಾಜದಲ್ಲಿ ರೂಢಿಗೆ ಒಳಪಡಿಸಿರುವ ಹುನ್ನಾರಗಳಿಗೆ ಲೆಕ್ಕವಿಲ್ಲ. ಅದರಲ್ಲಿ ಮುಟ್ಟು–ಮೈಲಿಗೆಯೂ ಒಂದು. ಮುಟ್ಟು–ಮೈಲಿಗೆಯನ್ನೇ ನೆವ ಮಾಡಿಕೊಂಡು ಎಷ್ಟೋ ಧಾರ್ಮಿಕ, ಕೌಟುಂಬಿಕ ಹಕ್ಕುಗಳನ್ನು ಮಹಿಳೆಗೆ ನಿರಾಕರಿಸಲಾಗಿದೆ. ಸಂತತಿ ಮುಂದುವರಿಸುವ ಶಕ್ತಿಯ ಸಂಕೇತವಾದ ಮುಟ್ಟು, ಮೈಲಿಗೆ ಆಗುವುದಾದರೂ ಹೇಗೆ? ಇಂತಹ ಅನಿಷ್ಟ ಆಚರಣೆಗಳ ಬಗೆಗೆ ತಿಳಿವಳಿಕೆ ಮೂಡಿಸುವ ಕಲಿಕೆಯ ತಾಣವೂ ಹೌದು ಶಾಲೆ. ಅಂತಹ ಶಾಲೆಯೇ ಮೌಢ್ಯ ಮುಂದುವರಿಕೆಗೆ ಉತ್ತೇಜನ ನೀಡುವಂತಹ ವೇದಿಕೆಯಾಗುವುದು ಚೋದ್ಯದ ಸಂಗತಿ.

ಋತುಚಕ್ರದಂತಹ ವಿಷಯಗಳ ಬಗೆಗೆ ಶಿಕ್ಷಕರಲ್ಲಿಯೇ ಸರಿಯಾದ ತಿಳಿವಳಿಕೆ ಇಲ್ಲದಿದ್ದರೆ ಈ ಸಂಬಂಧ ಸಮಾಜದಲ್ಲಿ ನೆಲೆಗೊಂಡಿರುವ ತಪ್ಪು ಗ್ರಹಿಕೆಗಳನ್ನು ನಿವಾರಿಸಲು ಅವರು ಕೈಜೋಡಿಸುವುದಾದರೂ ಹೇಗೆ? ಇಂತಹ ವಿಚಾರಗಳನ್ನು ವೈಜ್ಞಾನಿಕವಾಗಿ ತಿಳಿದುಕೊಂಡು ವಿದ್ಯಾರ್ಥಿಗಳಿಗೆ ವಿವರಿಸಬೇಕಾದವರೇ, ಯಾವುದೋ ಕಾಲಘಟ್ಟದಲ್ಲಿ ರೂಢಿಗೆ ಬಂದ ಆಚರಣೆಯನ್ನು ಕುರುಡಾಗಿ ಪಾಲಿಸಿದರೆ, ಮಕ್ಕಳ ಮೇಲೆ ಅದನ್ನು ಹೇರಿದರೆ ಶಿಕ್ಷಣದ ಉದ್ದೇಶವೇ ಸೋಲುತ್ತದೆ.

ಹೆಣ್ಣುಮಕ್ಕಳ ಸ್ಥೈರ್ಯ ಕುಗ್ಗಿಸುವಂತಹ ಕೆಲಸಗಳು ಹೇಗೆಲ್ಲ ಆಗುತ್ತವೆ ಎಂಬುದಕ್ಕೆ ಈ ವಿದ್ಯಮಾನವನ್ನೂ ಒಂದು ನಿದರ್ಶನವಾಗಿ ಪರಿಗಣಿಸಬಹುದು. ವೈಜ್ಞಾನಿಕವಾಗಿ ದೇಶ ಬಹಳಷ್ಟು ಮುನ್ನಡೆ ಸಾಧಿಸಿದೆ ಎಂದು ಹೆಮ್ಮೆಯಿಂದ ಬೀಗುತ್ತೇವೆ. ಆದರೆ, ಮಕ್ಕಳಿಗೆ ಕಲಿಸುವ ಗುರುತರ ಹೊಣೆ ಹೊತ್ತಿರುವ ಮೇಷ್ಟ್ರುಗಳ ಮಿದುಳಿಗೇ ಇನ್ನೂ ವೈಜ್ಞಾನಿಕ ಮನೋಭಾವ ಹೊಕ್ಕಿಲ್ಲ ಎಂಬುದಕ್ಕೆ ಈ ವಿದ್ಯಮಾನವು ಕನ್ನಡಿ ಹಿಡಿಯುತ್ತದೆ. ನಮ್ಮ ಶಿಕ್ಷಣ ವ್ಯವಸ್ಥೆಯ ಮಿತಿಗಳಿಗೆ ಉದಾಹರಣೆಯಾಗಿಯೂ ನಿಲ್ಲುತ್ತದೆ.

ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಮಿತಿಗಳು, ನ್ಯೂನತೆಗಳು ಯಾವುದೋ ಒಂದು ರಾಜ್ಯಕ್ಕೆ, ಒಂದು ಶಾಲೆಗೆ ಅಥವಾ ಒಂದು ಪ್ರದೇಶಕ್ಕೆ ಸೀಮಿತ ಎಂದು ಭಾವಿಸಬೇಕಾಗಿಲ್ಲ. ಎಲ್ಲೆಡೆಯೂ ಕಾಣಬಹುದು. ಶಿಕ್ಷಣದ ಬುನಾದಿ ಗಟ್ಟಿ ಇಲ್ಲದಿದ್ದರೆ ಅದರ ಪರಿಣಾಮ ಹೆಚ್ಚು ಗಂಭೀರವಾದುದು ಮತ್ತು ದೀರ್ಘಕಾಲ ಕಾಡುವಂತಹುದು. ಮಕ್ಕಳ ಭವಿಷ್ಯವನ್ನೇ ಅದು ಕುಂಠಿತಗೊಳಿಸಬಲ್ಲದು. ಪ್ರಾಥಮಿಕ ಶಿಕ್ಷಣಕ್ಕೆ ನಾವು ನೀಡಬೇಕಾದಷ್ಟು ಗಮನ ನೀಡುತ್ತಿಲ್ಲ ಎಂದು ಶಿಕ್ಷಣ ತಜ್ಞರು ಹೇಳುತ್ತಲೇ ಇದ್ದಾರೆ. ಆದರೆ, ಅವರ ಮಾತು ನಮ್ಮ ಅಧಿಕಾರ ರಾಜಕಾರಣದ ಕಿವಿಗೆ ಬೀಳುತ್ತಿಲ್ಲ. ಸರ್ಕಾರಿ ಶಾಲೆಗಳು ಒಂದೆಡೆ ಮೂಲ ಸೌಕರ್ಯಗಳ ಕೊರತೆಯಿಂದ ನರಳುತ್ತಿವೆ. ಅದಕ್ಕಿಂತ ಹೆಚ್ಚಾಗಿ ಸಮರ್ಪಕ ಶಿಕ್ಷಕ ಸಂಪನ್ಮೂಲ ಇಲ್ಲದಿರುವುದು ಅವುಗಳನ್ನು ಸೊರಗಿಸುತ್ತಿವೆ.

ಶಾಲಾ ಶಿಕ್ಷಣವನ್ನು ಸಶಕ್ತಗೊಳಿಸುವ ದಿಸೆಯಲ್ಲಿ ಗಂಭೀರ ಪ್ರಯತ್ನಗಳು ಆಗಬೇಕಾಗಿದೆ. ಮಕ್ಕಳಿಗೆ ಕಲಿಸುವ ಶಿಕ್ಷಕರ ತರಬೇತಿಯು ಗುಣಾತ್ಮಕವಾಗಿ ನಡೆಯಬೇಕು. ಶಿಕ್ಷಕರ ತರಬೇತಿ ಕೋರ್ಸ್‌ಗಳಿಗೆ ಸೇರುವವರನ್ನು ಅಂಕಗಳ ಆಧಾರದಲ್ಲಿಯೇ ಅಳೆಯಬೇಕಿಲ್ಲ. ತಮ್ಮಲ್ಲಿಗೆ ಕಲಿಯಲು ಬರುವ ವಿದ್ಯಾರ್ಥಿಗಳನ್ನು ಯಾವ ರೀತಿಯಲ್ಲಿ ಪ್ರಭಾವಿಸಬಲ್ಲರು ಎಂಬ ನೆಲೆಯಲ್ಲಿಯೂ ಅವರ ಪ್ರತಿಭೆಯನ್ನು ಅಳೆಯಬೇಕು. ಲಿಂಗಸಂವೇದನೆ ಕುರಿತು ಶಿಕ್ಷಕರಲ್ಲಿ ಸ್ಪಷ್ಟ ತಿಳಿವಳಿಕೆ ಮೂಡಿಸಬೇಕು. ಸಂಪ್ರದಾಯಗಳ ಬೆಳಕಿನಲ್ಲಿ ಲೋಕವನ್ನು ಗ್ರಹಿಸುತ್ತಿರುವ ಶಿಕ್ಷಕರಿಗೆ ಆಧುನಿಕ ಸಂವೇದನೆಗಳ ಬಗೆಗೆ ತಿಳಿಹೇಳಬೇಕು. ನಾವು ಕಟ್ಟಬೇಕಿರುವ ಸಮಾಜ ಹೇಗಿದ್ದರೆ ಚೆನ್ನ ಎಂಬ ಪ್ರಜ್ಞೆ ಅವರಲ್ಲಿ ಹುಟ್ಟಬೇಕು. ಯಾವುದು ತ್ಯಾಜ್ಯ, ಯಾವುದು ಗ್ರಾಹ್ಯ ಎಂಬ ಅರಿವು ಅವರಲ್ಲಿ ಒಡಮೂಡುವಂತೆ ಆಗಬೇಕು. ಆಗ ತಲೆತಗ್ಗಿಸುವಂಥ ಇಂತಹ ಪ್ರಸಂಗಗಳು ಮತ್ತೆ ವರದಿಯಾಗಲಿಕ್ಕಿಲ್ಲ.




■ ಎನ್‌. ಉದಯಕುಮಾರ್